ನಿರೀಕ್ಷೆ

ಇದೊಂದು ನೀತಿ ಕತೆಯಾಗಿದೆ... ಓರ್ವ ಸೇನಾ ನಾಯಕನು ಯುದ್ಧವೊಂದರಲ್ಲಿ ಹೀನಾಯವಾಗಿ ಸೋತು ಹೋದ. ಅವನಲ್ಲಿ ನಿರೀಕ್ಷೆಯ ಯಾವುದೇ ಲಕ್ಷಣ ಬಾಕಿ ಉಳಿಯಲಿಲ್ಲ. ಆತ ಹತಾಶ ಸ್ಥಿತಿಯಲ್ಲಿ ಅಲ್ಲಿ–ಇಲ್ಲಿ ಅಲೆದಾಡುತ್ತಾ ನಿರ್ಜನ ಪ್ರದೇಶವನ್ನು ತಲುಪಿದ. ಅಲ್ಲಿ ಬಂಡೆಯೊಂದರ ಮೇಲೆ ಕುಳಿತುಕೊಂಡು ಪರಿಸ್ಥಿತಿಯ ಬಗ್ಗೆ ಆಲೋಚಿಸತೊಡಗಿದ. ಅಷ್ಟರಲ್ಲಿ ಅವನ ದೃಷ್ಟಿಯು ಇರುವೆಯೊಂದರ ಮೇಲೆ ಬಿತ್ತು. ಇರುವೆಯು ತನ್ನ ಬಾಯಿಯಲ್ಲಿ ಧಾನ್ಯವನ್ನು ಕಚ್ಚಿ ಹಿಡಿದು ಮೇಲೆ ಹತ್ತಲು ಪ್ರಯತ್ನಿಸುತ್ತಿತ್ತು. ಸ್ವಲ್ಪ ಮೇಲೆ ಹತ್ತಿ, ಸರ್ರನೆ ಕೆಳಕ್ಕೆ ಜಾರುತ್ತಿತ್ತು. ಆದರೆ ಅದು ಸೋಲೊಪ್ಪಿಕೊಳ್ಳದೆ ಮತ್ತೆ ಮತ್ತೆ ಪ್ರಯತ್ನಿಸುತ್ತಿತ್ತು. ಕೊನೆಗೂ ಅದು ಮೇಲೆ ಹತ್ತುವಲ್ಲಿ ಯಶಸ್ವಿಯಾಯಿತು. ಈ ದೃಶ್ಯವನ್ನು ನೋಡಿದಾಗ, ಹತಾಶ ಸೇನಾ ನಾಯಕನ ಕಣ್ಣಿನಲ್ಲಿ ನಿರೀಕ್ಷೆಯ ಕಿರಣ ಮಿನುಗತೊಡಗಿತು. ಅವನು ತನಗೆ ತಾನೇ ಹೇಳಿಕೊಂಡ... ಈ ಸಣ್ಣ ಜೀವಿಯು ಅನೇಕ ಬಾರಿ ವಿಫಲವಾಗಿಯೂ ಹತಾಶವಾಗಲಿಲ್ಲ; ಹಾಗಿರುವಾಗ ಸೃಷ್ಟಿಗಳಲ್ಲಿ ಶ್ರೇಷ್ಠನಾದ ಮಾನವನೆನಿಸಿಕೊಂಡಿರುವ ನಾನು ಯಾಕೆ ನಿರಾಶನಾಗಬೇಕು? ಕೊನೆಗೂ ಅವನು ಹೊಸ ಹುರುಪಿನೊಂದಿಗೆ ಎದ್ದನು. ತನ್ನ ಸೇನೆಯನ್ನು ಪುನಃ ಸಂಘಟಿಸಿದನು. ಬಳಿಕ ಶತ್ರುಗಳ ವಿರುದ್ಧ ಹೋರಾಡಿ ಜಯ ಗಳಿಸಿದನು. ಚಿಂತಿಸಿ ನೋಡಿದರೆ, ಆ ಸಣ್ಣ ಇರುವೆಯು ತನ್ನ ಕೃತ್ಯದ ಮೂಲಕ ಸೇನಾ ನಾಯಕನ ಮನಸ್ಸಿನಲ್ಲಿ ಹಚ್ಚಿದ ನಿರೀಕ್ಷೆಯ ಕಿಡಿಯೇ ಈ ಯುದ್ಧದಲ್ಲಿ ಅತಿ ದೊಡ್ಡ ಮತ್ತು ನಿರ್ಣಾಯಕ ಆಯುಧವಾಗಿತ್ತು.

ಒಮ್ಮೆ ಅಲ್ಲಾಹನ ಸಂದೇಶವಾಹಕರು(ಸ) ತಮ್ಮ ಅನುಯಾಯಿಗಳಿಗೆ ಓರ್ವ ವ್ಯಕ್ತಿಯ ವೃತ್ತಾಂತವನ್ನು ತಿಳಿಸಿದರು: ಆ ವ್ಯಕ್ತಿಯು ತೊಂಭತ್ತೊಂಭತ್ತು ಮಂದಿಯ ಕೊಲೆ ಮಾಡಿದ್ದನು. ಕೊನೆಗೆ ತಾನು ಮಾಡುತ್ತಿರುವುದು ತಪ್ಪು ಎಂಬ ಆಲೋಚನೆ ಅವನ ಮನದಲ್ಲಿ ಮೂಡಿತು. ಆದರೆ ಇಷ್ಟೆಲ್ಲ ಕೊಲೆಗಳನ್ನು ಮಾಡಿದ ಮೇಲೆ ತನ್ನ ಪಶ್ಚಾತ್ತಾಪ ಸ್ವೀಕರಿಸಲ್ಪಡುವುದೇ ಎಂಬ ಸಂಶಯ ಆತನ ಮನದಲ್ಲಿ ಮೂಡಿತು. ಹೀಗೆ ಅವನು ತನ್ನ ಸಮುದಾಯದ ಓರ್ವ ಹಿರಿಯ ವ್ಯಕ್ತಿಯ ಮುಂದೆ ತನ್ನ ಕ್ಷಮೆಯ ಆಗ್ರಹ ಮತ್ತು ಅದರ ಸ್ವೀಕೃತಿಯ ಬಗ್ಗೆ ಇರುವ ಸಂಶಯದ ಕುರಿತು ತಿಳಿಸಿದನು. ಆ ಹಿರಿಯರು, "ಇಲ್ಲ, ಇನ್ನು ಯಾವುದೇ ನಿರೀಕ್ಷೆ ಇಲ್ಲ" ಎಂದರು. ಇಲ್ಲ ಎಂಬ ಉತ್ತರ ಕೇಳಿದಾಗ ಆ ಕೊಲೆಗಾರನ ಪಿತ್ತ ನೆತ್ತಿಗೇರಿತು ಮತ್ತು ಆತ ಕೋಪದ ಭರದಲ್ಲಿ ಆ ಹಿರಿಯರನ್ನೇ ಕೊಂದು ಬಿಟ್ಟನು. ಈಗ ಕೊಲೆಗಳ ಸಂಖ್ಯೆಯು ನೂರು ಪೂರ್ತಿಯಾಯಿತು. ಅವನು ಇನ್ನೂ ಹೆಚ್ಚು ಕಳವಳಗೊಂಡನು. ಕೊನೆಗೆ ಆತ ಓರ್ವ ಸಜ್ಜನರಾದ ವಿದ್ವಾಂಸರ ಮುಂದೆ ತನ್ನ ಸಮಸ್ಯೆಯನ್ನು ಅರುಹಿದನು. ಆಗ ವಿದ್ವಾಂಸರು ಈ ರೀತಿ ಉತ್ತರಿಸಿದರು, "ಹೌದು. ನಿನ್ನ ತೌಬಾ ಸ್ವೀಕರಿಸಲ್ಪಡಲೂ ಬಹುದು. ಆದರೆ ಒಂದು ಶರ್ತವಿದೆ. ನಿನ್ನ ವಾಸಸ್ಥಳವನ್ನು ಬದಲಿಸು. ನಿನ್ನ ಗ್ರಾಮದಿಂದ ಇಂತಿಂತಹ ಗ್ರಾಮಕ್ಕೆ ವಲಸೆ ಹೋಗು. ಅಲ್ಲಿ ಸಜ್ಜನರು ವಾಸಿಸುತ್ತಿದ್ದಾರೆ. ಅವರೊಡನೆ ಸೇರಿ ನೀನು ಅಲ್ಲಾಹನಿಗೆ ಅತ್ಯುತ್ತಮ ಆರಾಧನೆಗಳನ್ನು ಸಲ್ಲಿಸಬಲ್ಲೆ." ಕೊಲೆಗಾರನಿಗೆ ಸಂತೋಷವಾಯಿತು. ತೌಬಾ ಸ್ವೀಕರಿಸಲ್ಪಡುವ ನಿರೀಕ್ಷೆಯು ಅವನ ನರನಾಡಿಗಳಲ್ಲಿ ಜೀವನದ ಒಂದು ಹೊಸ ಅಲೆಯನ್ನೆಬ್ಬಿಸಿತು. ಆತ ನಿರಾಶೆಯ ಅಂಧಕಾರಮಯ ದಾರಿಯಿಂದ ಹೊರಟು ಸಜ್ಜನರ ಆ ಗ್ರಾಮದೆಡೆಗೆ ಪ್ರಯಾಣ ಬೆಳೆಸಿದ. ಆದರೆ ದಾರಿಮಧ್ಯೆಯೇ ಅವನ ಜೀವನಾವಧಿಯು ಮುಗಿದು ಹೋಯಿತು. ಅವನು ಅಲ್ಲೇ ಕುಸಿದು ಬಿದ್ದು ಅಸು ನೀಗಿದ. ಅಲ್ಲಿಗೆ ಕರುಣೆ ಮತ್ತು ಯಾತನೆಯ ದೇವಚರರು ಆಗಮಿಸಿದರು. ಈಗ ಅವನನ್ನು ಯಾರ ಹೊಣೆಯಲ್ಲಿ ವಹಿಸಿಕೊಡುವುದು ಎಂಬ ಸಮಸ್ಯೆ ತಲೆದೋರಿತು. "ಇವನು ಮನಸಾರೆ ಪಶ್ಚಾತ್ತಾಪ ಪಟ್ಟು ದೇವನ ಕರುಣೆಯನ್ನು ಅರಸಿ ಹೊರಟಿದ್ದಾನೆ. ಆದ್ದರಿಂದ ಇವನನ್ನು ನಮ್ಮ ಸುಪುರ್ದಿಗೆ ಒಪ್ಪಿಸಬೇಕು" ಎಂದು ಕರುಣೆಯ ದೇವಚರರು ಹೇಳಿದರೆ, "ಇಲ್ಲ, ಇವನು ನೂರು ಜನರನ್ನು ಕೊಂದಿದ್ದಾನೆ. ಆದ್ದರಿಂದ ಇವನನ್ನು ನಮ್ಮ ಹೊಣೆಗೆ ವಹಿಸಿ ಕೊಡಬೇಕಾಗಿದೆ" ಎಂದು ನರಕದ ದೇವಚರರು ಹೇಳಿದರು. ಕೊನೆಗೆ ಪ್ರಯಾಣದ ದಾರಿಯನ್ನು ಅಳೆದು ನೋಡುವುದಾಗಿಯೂ ಒಂದು ವೇಳೆ ಮರಣ ಹೊಂದಿದವನು ಸಜ್ಜನರ ಗ್ರಾಮಕ್ಕೆ ಹತ್ತಿರವಿದ್ದರೆ ಕರುಣೆಯ ದೇವಚರರು ವಹಿಸುವುದು ಅನ್ಯಥಾ ಯಾತನೆಯ ದೇವಚರರು ವಹಿಸುವುದು ಎಂದು ತೀರ್ಮಾನಿಸಲಾಯಿತು. ದಾರಿಯನ್ನು ಅಳೆದಾಗ, ಆತ ಸಜ್ಜನರ ಗ್ರಾಮಕ್ಕೆ ಹತ್ತಿರವಿದ್ದುದು ತಿಳಿಯಿತು. ಈ

www.uzarfalahi.com

ರೀತಿ ಕರುಣೆಯ ದೇವಚರರು ಅವನ ಆತ್ಮವನ್ನು ವಹಿಸಿಕೊಂಡರು. (ಈ ಇಡೀ ವೃತ್ತಾಂತವು ಮುತ್ತಫಕ್ ಅಲೈಹಿ ಹದೀಸ್‌ನಿಂದ ಪಡೆಯಲಾಗಿದೆ.)

ನಿರೀಕ್ಷೆಯೆಂದರೆ ಕಷ್ಟದ ಸಮಯದಲ್ಲಿ ಮಾನವನು ಭೀತಿಗೊಳಗಾಗುವುದರ ಬದಲು, ಈ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು ಎಂದು ಸಮಾಧಾನಚಿತ್ತದಿಂದ ನೋಡುವುದಾಗಿದೆ. ಅಂತೆಯೇ ಸಂಕೀರ್ಣತೆಯ ಬಳಿಕ ವಿಶಾಲತೆಯನ್ನು, ಕಾಠಿಣ್ಯದ ಬಳಕ ವಿನಮ್ರತೆಯನ್ನು ಮತ್ತು ಸಂಕಷ್ಟದ ಬಳಿಕ ಸೌಲಭ್ಯವನ್ನು ಮನಸಾರೆ ನಿರೀಕ್ಷಿಸುವುದೇ ನಿಜವಾದ ನಿರೀಕ್ಷೆಯಾಗಿದೆ. ಮಾನವ ಚಿತ್ತದ ಇದೇ ಅವಸ್ಥೆಯನ್ನು ನಿರೀಕ್ಷೆ ಎಂದು ಹೇಳಲಾಗುತ್ತದೆ. ಇದುವೇ ಗಂಡಾಂತರಗಳನ್ನು ದೂರಗೊಳಿಸುವ ನಿಟ್ಟನಲ್ಲಿ ಪರಿಶ್ರಮ ಪಡಲು ಮಾನವನನ್ನು ಪ್ರೇರೇಪಿಸುತ್ತದೆ ಮತ್ತು ಕೊನೆಯುಸಿರಿನ ವರೆಗೂ ಉದ್ದೇಶದ ಈಡೇರಿಕೆಗಾಗಿ ಸಕ್ರಿಯವಾಗಿರಿಸುತ್ತದೆ.

ಉಲುಲ್ ಅಝ್ಮ್ (ಸ್ಥಿರಚಿತ್ತರಾದ) ಪ್ರವಾದಿಗಳ ಜೀವನವನ್ನು ನಾವು ಈ ವಿಷಯವಾಗಿ ಅವಲೋಕನ ನಡೆಸುವಾಗ, ಮೇಲಿನ ವಿಷಯದಲ್ಲಿ ಅತ್ಯುತ್ತಮ ಉದಾಹರಣೆಗಳು ನಮಗೆ ಕಾಣ ಸಿಗುತ್ತದೆ. ಸಂದೇಶ ಪ್ರಚಾರದ ದೌತ್ಯವು ಅತ್ಯಂತ ಕ್ಲಿಷ್ಟಕರ ಕಾರ್ಯವಾಗಿದೆ. ಒಂದು ಸಮಾಜದಲ್ಲಿ ಚಾಲ್ತಿಯಲ್ಲಿರುವ ವ್ಯವಸ್ಥೆಯನ್ನು ಬೇರು ಸಮೇತ ಕಿತ್ತು ಹಾಕಿ ಇನ್ನೊಂದು ವ್ಯವಸ್ಥೆಯನ್ನು ಜಾರಿಗೊಳಿಸುವುದು, ಜನರ ಹೃದಯಗಳನ್ನು ಸಂಪೂರ್ಣ ಬದಲಿಸುವುದು, ಜಾರಿಯಲ್ಲಿರುವ ಆಚರಣೆಗಳು, ಜನರ ಇಷ್ಟಾನಿಷ್ಟಗಳು... ಅಷ್ಟೇ ಅಲ್ಲ, ಅವರ ಆಲೋಚನಾ ವಿಧಾನವನ್ನೂ ಬದಲಿಸಲು ಪ್ರಯತ್ನಿಸುವುದು ಸುಲಭದ ಕಾರ್ಯ ಅಲ್ಲ. ಈ ಹಾದಿಯಲ್ಲಿ ಮೊದಲ ಹೆಜ್ಜೆಯಲ್ಲೇ ಇಡೀ ಸಮಾಜದ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಆದರೆ ಜನರು ಇಂದಲ್ಲದಿದ್ದರೆ ನಾಳೆಯಾದರೂ ಬದಲಾಗುವರು ಎಂಬ ನಿರೀಕ್ಷೆಯೊಂದಿಗೇ ಪ್ರವಾದಿಗಳು ಈ ದೌತ್ಯವನ್ನು ಆರಂಭಿಸುತ್ತಾರೆ. ಅವರು ಸಾವಿರ ಬಾರಿ ವಿಫಲರಾಗಿಯೂ ಹತಾಶರಾಗುವುದಿಲ್ಲ. ಎಲ್ಲ ಮಗ್ಗುಲಿನಿಂದಲೂ ನಿರಾಕರಣೆ, ನಿಷೇಧವು ಎದುರಾದರೂ ಅವರ ನಿರೀಕ್ಷೆಯ ಕಿರಣವು ನಂದಿ ಹೋಗುವುದಿಲ್ಲ. ಈ ಹಾದಿಯಲ್ಲಿ ಅನುಭವಿಸುವ ಹಿಂಸೆಗಳು ಮತ್ತು ಸಂಕಷ್ಟಗಳು ಅವರನ್ನು ಹಿಮ್ಮೆಟ್ಟಿಸುತ್ತಿರಲಿಲ್ಲ ಹಾಗೂ ಅವರು ಎಂದೂ ನಿರೀಕ್ಷೆಯನ್ನು ತೊರೆಯುತ್ತಿರಲಿಲ್ಲ. ಅಂತ್ಯ ಪ್ರವಾದಿ ಮುಹಮ್ಮದ್‌ರವರ(ಸ) ಚರಿತ್ರೆಯಲ್ಲಿ ಈ ವಿಷಯವಾಗಿ ಅತ್ಯುತ್ತಮ ಮಾದರಿ ಇದೆ. ಸಾವಿರಾರು ರೀತಿಯ ವಿರೋಧ ಮತ್ತು ಸಂಕಷ್ಟಗಳನ್ನು ಸಹಿಸಿದರೂ ಜನರು ಒಂದಲ್ಲ ಒಂದು ದಿನ ವಿಶ್ವಾಸವನ್ನು ತಾಳುವರು ಎಂಬ ಒಂದೇ ನಿರೀಕ್ಷೆಯಿಂದ ಜನರನ್ನು ಅಲ್ಲಾಹನ ಧರ್ಮದ ಕಡೆಗೆ ಕರೆಯುತ್ತಲೇ ಇದ್ದರು. ಎಲ್ಲಿಯ ವರೆಗೆಂದರೆ, ಜನರು ಅವರನ್ನು ಹೊಡೆದರು, ಹೆಜ್ಜೆ ಹೆಜ್ಜೆಗೂ ಸತಾಯಿಸಿದರು; ಕೊನೆಗೆ ಸೃಷ್ಟಿಕರ್ತನಿಗೂ ಅದನ್ನು ಕಂಡು ಸಹಿಸಲಾಗಲಿಲ್ಲ. ತಾಯಿಫ್‌ನ ಘಟನೆಯ ಬಳಿಕ ಮರಳುತ್ತಿರುವಾಗ ಯಾತನೆಯ ದೇವಚರರು ಬಂದು, "ನೀವು ಇಚ್ಛಿಸಿದರೆ ತಾಯಿಫ್‌ನ ಎರಡು ಬೆಟ್ಟಗಳನ್ನು ಢಿಕ್ಕಿ ಹೊಡೆಸಿ ಈ ಜನರನ್ನು ಜಜ್ಜಿ ಬಿಡಲು ಅಲ್ಲಾಹನು ನಮ್ಮನ್ನು ಕಳುಹಿಸಿದ್ದಾನೆ" ಎಂದರು. ಆದರೆ ಅಲ್ಲಾಹನ ಸಂದೇಶವಾಹಕರು(ಸ) ನಿರೀಕ್ಷೆ ತುಂಬಿದ ಉತ್ತರ ನೀಡಿದರು, "ಇಲ್ಲ. ನಾನು ಹಾಗೇನೂ ಬಯಸುವುದಿಲ್ಲ. ಇವರಲ್ಲದಿದ್ದರೂ ಇವರ ಮುಂದಿನ ಪೀಳಿಗೆಯಾದರೂ ಅಲ್ಲಾಹನ ಮೇಲೆ ವಿಶ್ವಾಸ ತಾಳಬಹುದು ಮತ್ತು ಬಹುದೇವ ವಿಶ್ವಾಸದಿಂದ ದೂರವಿರಬಹುದು ಎಂಬ ನಿರೀಕ್ಷೆ ನನಗಿದೆ." (ಮುತ್ತಫಕ್ ಅಲೈಹಿ)

ಅಲ್ಲಾಹನ ಸಹಾಯವು ಸದಾ ತಮ್ಮ ಜತೆಗಿರುವುದು ಎಂಬ ನಿರೀಕ್ಷೆ ಪ್ರವಾದಿವರ್ಯರಿಗೆ(ಸ) ಇತ್ತು. ಇದನ್ನು ಪ್ರವಾದಿವರ್ಯರು(ಸ) ಹಿಜ್ರತ್‌ನ ವೇಳೆ ಸೌರ್ ಗುಹೆಯಲ್ಲಿ ಅಬೂಬಕರ್ ಸಿದ್ದೀಕ್‌ರವರು(ರ) ಕಳವಳಗೊಂಡಿರುವುದನ್ನು ಕಂಡು ವ್ಯಕ್ತಪಡಿಸಿದ್ದು. ಅವರು ಅಬೂಬಕರ್‌ರನ್ನು(ರ) ಉದ್ದೇಶಿಸಿ,

﴿لَا تَحۡزَنۡ إِنَّ ٱللَّهَ مَعَنَاۖ ٤٠﴾ التوبة: ٤٠

"ಭಯಪಡಬೇಡಿರಿ. ಅಲ್ಲಾಹ್ ನಮ್ಮ ಜತೆಗಿದ್ದಾನೆ" (ಪವಿತ್ರ ಕುರ್‌ಆನ್: 9: 40) ಎಂದು ಹೇಳಿದ್ದನ್ನು ಸ್ಮರಿಸಿರಿ.

www.uzaifalahi.com

ಇದೇ ಅವಸ್ಥೆ ಪ್ರವಾದಿ ನೂಹ್(ಅ)ರದ್ದಾಗಿತ್ತು. ಒಮ್ಮೆ ಚಿಂತಿಸಿ ನೋಡಿ. ಒಂಭೈನೂರ ಐವತ್ತು ವರ್ಷ ಅವರು ತಮ್ಮ ಜನಾಂಗಕ್ಕೆ ಸತ್ಯದ ಸಂದೇಶ ನೀಡುತ್ತಲಿದ್ದರು. ಯಾವತ್ತೂ ದಣಿಯಲಿಲ್ಲ, ಯಾವತ್ತೂ ಆಲಸ್ಯ ತೋರಲಿಲ್ಲ. ಅತ್ಯಂತ ಆಸಕ್ತಿಯಿಂದ ಮತ್ತು ದೃಢತೆಯೊಂದಿಗೆ ಅವರು ಜನರನ್ನು ಅಲ್ಲಾಹನ ಕಡೆಗೆ ಕರೆಯುತ್ತಿದ್ದರು... ಬಹುಶಃ ಜನರು ಒಪ್ಪಲೂ ಬಹುದು ಎಂಬೊಂದು ನಿರೀಕ್ಷೆಯೊಂದಿಗೆ. ಅವರು ತಮ್ಮ ಜನಾಂಗದವರನ್ನು ಎಲ್ಲ ರೀತಿಯಿಂದಲೂ ಅಲ್ಲಾಹನ ಕಡೆಗೆ ಕರೆದರು. ವೈಯಕ್ತಿಕವಾಗಿ, ಸಾಮೂಹಿಕವಾಗಿ, ರಹಸ್ಯವಾಗಿ, ಬಹಿರಂಗವಾಗಿ... ಹೀಗೆ ಈ ಜನರು ಒಂದಲ್ಲ ಒಂದು ದಿನ ಸತ್ಯವಿಶ್ವಾಸ ಸ್ವೀಕರಿಸುವರು ಎಂಬ ನಿರೀಕ್ಷೆಯಿಂದ ಎಲ್ಲ ವಿಧಾನವನ್ನೂ ಅವರು ಪ್ರಯೋಗಿಸಿದರು. ಕುರ್‌ಆನಿನಲ್ಲಿ ಅವರ ಈ ಪ್ರಯತ್ನಗಳನ್ನು ಈ ರೀತಿ ಚಿತ್ರಿಸಲಾಗಿದೆ:

﴿ قَالَ رَبِّ إِنِّي دَعَوْتُ قَوْمِي لَيْلًا وَنَهَارًا ﴿٥﴾ فَلَمْ يَزِدْهُمْ دُعَاءِي إِلَّا فِرَارًا ﴿٦﴾ وَإِنِّي كُلَّمَا دَعَوْتُهُمْ لِتَغْفِرَ لَهُمْ جَعَلُوا أَصَابِعَهُمْ فِي آذَانِهِمْ وَاسْتَغْشَوْا ثِيَابَهُمْ وَأَصَرُّوا وَاسْتَكْبَرُوا اسْتِكْبَارًا ﴿٧﴾ ثُمَّ إِنِّي دَعَوْتُهُمْ جِهَارًا ﴿٨﴾ ثُمَّ إِنِّي أَعْلَنتُ لَهُمْ وَأَسْرَرْتُ لَهُمْ إِسْرَارًا ﴿٩﴾ ﴾ نوح: ٥ - ٩

ಅವರು ಹೀಗೆ ಬಿನ್ನವಿಸಿದರು, "ನನ್ನ ಪ್ರಭೂ, ನಾನು ನನ್ನ ಜನಾಂಗದವರನ್ನು ಹಗಲಿರುಳೆನ್ನದೆ ಕರೆದೆನು. ಆದರೆ ನನ್ನ ಕರೆಯು ಅವರ ಪಲಾಯನವನ್ನು ಮಾತ್ರ ಹೆಚ್ಚಿಸಿತು. ನೀನು ಅವರನ್ನು ಕ್ಷಮಿಸುವಂತಾಗಲೆಂದು ನಾನು ಅವರನ್ನು ಕರೆದಾಗಲೆಲ್ಲ ಅವರು ಕಿವಿಗಳಲ್ಲಿ ಬೆರಳುಗಳನ್ನು ತುರುಕಿಸಿಕೊಂಡರು. ತಮ್ಮ ವಸ್ತ್ರಗಳಿಂದ ಮುಖ ಮುಚ್ಚಿಕೊಂಡರು. ಹಠಮಾರಿತನ ತೋರಿದರು ಮತ್ತು ಭಾರೀ ಅಹಂಭಾವ ತೋರಿಸಿದರು. ತರುವಾಯ ನಾನು ಅವರಿಗೆ ಬಹಿರಂಗವಾಗಿ ಕರೆ ಕೊಟ್ಟೆನು. ಅನಂತರ ನಾನು ಘಂಟಾಘೋಷವಾಗಿ ಧರ್ಮಾಹ್ವಾನ ನೀಡಿದೆನು ಮತ್ತು ರಹಸ್ಯವಾಗಿಯೂ ತಿಳಿ ಹೇಳಿದೆನು..." (ಪವಿತ್ರ ಕುರ್‌ಆನ್: 71: 5–9)

ಅದೇ ರೀತಿ ನಾವು ಪ್ರವಾದಿ ಯಅ್‌ಕೂಬ್‌ರ(ಅ) ಚರಿತ್ರೆಯ ಅಧ್ಯಯನ ನಡೆಸುವಾಗ, ಅವರು ಎಂತಹ ಸಂಕಷ್ಟಭರಿತ ಪರಿಸ್ಥಿತಿಯಲ್ಲಿಯೂ ಅಲ್ಲಾಹನ ಮೇಲಿನ ಭರವಸೆ ಮತ್ತು ನಿರೀಕ್ಷೆಯನ್ನು ಕೈ ಬಿಟ್ಟಿರಲಿಲ್ಲ ಎಂಬುದು ಅರಿವಾಗುತ್ತದೆ. ಅವರ ಇಬ್ಬರು ಪ್ರೀತಿಯ ಪುತ್ರರಾದ ಯೂಸುಫ್(ಅ) ಮತ್ತು ಬಿನ್‌ಯಾಮಿನ್(ಅ) ಅವರಿಂದ ದೂರಗೊಳಿಸಲ್ಪಟ್ಟರು. ಯೂಸುಫ್(ಅ) ಎಲ್ಲಿದ್ದಾರೆ ಎಂಬ ಬಗ್ಗೆಯೂ ಅವರಿಗೆ ತಿಳಿಯಲಾಗಿರಲಿಲ್ಲ. ಮಗನ ವಿರಹದಿಂದ ಅವರು ಅತ್ತೂ ಅತ್ತೂ ತಮ್ಮ ದೃಷ್ಟಿಯನ್ನೇ ಕಳೆದುಕೊಂಡರು. ಆದರೆ ಅತ್ಯಂತ ಸಹನೆಯೊಂದಿಗೆ ಅವರು ನಿರೀಕ್ಷೆಯನ್ನು ನೆಚ್ಚಿಕೊಂಡರು ಮತ್ತು ಮಗನ ಮರಳಿಕೆಯ ಬಗ್ಗೆ ಎಂದೂ ನಿರಾಶರಾಗಲಿಲ್ಲ. ತಮ್ಮ ಇತರ ಮಕ್ಕಳೊಂದಿಗೂ ಅವರು ಯಾವಾಗಲೂ ತಮ್ಮ ಆ ಇಬ್ಬರು ಮಕ್ಕಳನ್ನು ಹುಡುಕಲು ಹೇಳುತ್ತಿದ್ದರು. ಇದನ್ನು ಕುರ್‌ಆನ್ ಈ ರೀತಿ ಉಲ್ಲೇಖಿಸಿದೆ,

﴿ يَا بَنِيَّ اذْهَبُوا فَتَحَسَّسُوا مِن يُوسُفَ وَأَخِيهِ وَلَا تَيْأَسُوا مِن رَّوْحِ اللَّهِ ۖ إِنَّهُ لَا يَيْأَسُ مِن رَّوْحِ اللَّهِ إِلَّا الْقَوْمُ الْكَافِرُونَ ﴿٨٧﴾ ﴾ يوسف: ٨٧

"ಓ ನನ್ನ ಮಕ್ಕಳೇ, ನೀವು ಹೋಗಿ ಯೂಸುಫನನ್ನೂ ಅವನ ತಮ್ಮನನ್ನೂ ಪತ್ತೆ ಹಚ್ಚಿರಿ. ಅಲ್ಲಾಹನ ಅನುಗ್ರಹದಿಂದ ನಿರಾಶರಾಗಬೇಡಿರಿ. ಅವನ ಅನುಗ್ರಹದಿಂದ ಸತ್ಯನಿಷೇಧಿಗಳು ಮಾತ್ರ ನಿರಾಶರಾಗುತ್ತಾರೆ." (ಪವಿತ್ರ ಕುರ್‌ಆನ್: 12: 87)

ಕೊನೆಗೂ ಅಲ್ಲಾಹನು ಪ್ರವಾದಿ ಯಅ್‌ಕೂಬ್‌ರ(ಅ) ನಿರೀಕ್ಷೆಯನ್ನು ಪೂರ್ತಿಗೊಳಿಸಿದನು. ಅವರ ಈರ್ವರು ಮಕ್ಕಳೂ ಅವರಿಗೆ ಉತ್ತಮ ಸ್ಥಿತಿಯಲ್ಲಿ ಸಿಕ್ಕಿದರು ಮತ್ತು ಅವರ ದೃಷ್ಟಿಯೂ ಮರಳಿ ಬಂತು.

ಇದೇ ರೀತಿ ಪ್ರವಾದಿ ಮೂಸಾ(ರ)ರ ನಿರೀಕ್ಷೆಯನ್ನು ಅಲ್ಲಾಹ್ ಪೂರ್ತೀಕರಿಸಿದನು. ಒಮ್ಮೆ ಕಲ್ಪಿಸಿ ನೋಡಿ... ಇಡೀ ಬನೀ ಇಸ್ರಾಈಲ್ ಸಮುದಾಯವು ಪ್ರವಾದಿ ಮೂಸಾರ(ಅ) ನೇತೃತ್ವದಲ್ಲಿ ಈಜಿಪ್ಟ್ ದೇಶದಿಂದ ಹೊರಟು ಹೋಗುತ್ತದೆ. ಆದರೆ ಅವರ ದಾರಿಗೆ ಸಮುದ್ರ ಅಡ್ಡವಾಗುತ್ತದೆ. ಅದೇ ವೇಳೆ ಫಿರ್‌ಔನ್ ತನ್ನ

www.uzalfadhil.com

ಸೇನೆಯೊಂದಿಗೆ ಅವರನ್ನು ಹಿಂಬಾಲಿಸಿಕೊಂಡು ಬರುತ್ತಾನೆ. ಇಂತಹ ಸ್ಥಿತಿಯಲ್ಲಿ ಒಂದೋ ಎಲ್ಲರೂ ನೀರಿನಲ್ಲಿ ಮುಳುಗಿ ಸಾಯಬೇಕು, ಇಲ್ಲವೇ ಫಿರ್‌ಔನನ ಸೇನೆಯಿಂದ ಹಿಡಿಯಲ್ಪಡಬೇಕು. ಬನೀ ಇಸ್ರಾಈಲರು ಕೂಡ ನಾವು ಹಿಡಿಯಲ್ಪಟ್ಟೆವು ಎಂದು ಬೊಬ್ಬಿರಿದರು. ಆದರೆ ಪ್ರವಾದಿ ಮೂಸಾ(ಅ) ಮಾತ್ರ ನಿರೀಕ್ಷೆ ತುಂಬಿದ ಘೋಷಣೆ ಹೊರಡಿಸುತ್ತಾರೆ...

﴿ قَالَ كَلَّآ ۖ إِنَّ مَعِىَ رَبِّى سَيَهْدِينِ ﴿٦٢﴾ ﴾ الشعراء: ٦٢

"ಖಂಡಿತ ಇಲ್ಲ, ನನ್ನಸಂಗಡ ನನ್ನ ಪ್ರಭು ಇದ್ದಾನೆ. ಅವನು ಖಂಡಿತವಾಗಿಯೂ ನನಗೆ ದಾರಿ ತೋರುವನು." (ಪವಿತ್ರ ಕುರ್‌ಆನ್: 26:62)

ಅಲ್ಲಾಹನು ಮೂಸಾರಿಗೆ(ಅ) ತಮ್ಮ ಲಾಠಿಯನ್ನು ನೀರಿಗೆ ಬಡಿಯಲು ಆದೇಶಿಸಿದನು. ಹೀಗೆ ನೀರು ಇಬ್ಭಾಗವಾಯಿತು ಮತ್ತು ಮೂಸಾ(ಅ) ತಮ್ಮ ಜನಾಂಗದೊಂದಿಗೆ ಸುರಕ್ಷಿತವಾಗಿ ಆಚೆ ದಡ ಸೇರಿಕೊಂಡರು. ಫಿರ್‌ಔನ್ ತನ್ನ ಸೇನೆಯೊಂದಿಗೆ ಅದೇ ದಾರಿಯಾಗಿ ಸಾಗುತ್ತಾ ಸಮುದ್ರದ ಮಧ್ಯಕ್ಕೆ ತಲುಪಿದಾಗ ಅಲ್ಲಾಹನ ಆದೇಶದಂತೆ ನೀರು ಮತ್ತೆ ಒಂದಾಯಿತು ಮತ್ತು ಆತ ತನ್ನ ಸೇನೆ ಸಮೇತ ನೀರಿನಲ್ಲಿ ಮುಳುಗಿ ಸತ್ತುಹೋದ.

ಇದೇ ರೀತಿ ಪ್ರವಾದಿ ಅಯ್ಯೂಬ್‌ರನ್ನೂ(ಅ) ಅಲ್ಲಾಹನು ಪರೀಕ್ಷಿಸಿದನು. ಅವರು ತೀವ್ರ ಅನಾರೋಗ್ಯಕ್ಕೆ ತುತ್ತಾದರು. ಸಂಪತ್ತು ಎಲ್ಲವೂ ಅಳಿದು ಹೋಯಿತು. ಮಕ್ಕಳೂ ಅವರನ್ನು ತೊರೆದರು. ಇನ್ನು ಕೇವಲ ಅಲ್ಲಾಹನ ಸಹಾಯದ ನಿರೀಕ್ಷೆಯೊಂದೇ ಉಳಿದಿತ್ತು. ಅವರು,

﴿ وَأَيُّوبَ إِذْ نَادَىٰ رَبَّهُۥٓ أَنِّى مَسَّنِىَ ٱلضُّرُّ وَأَنتَ أَرْحَمُ ٱلرَّٰحِمِينَ ﴿٨٣﴾ ﴾ الأنبياء: ٨٣

"ನನಗೆ ರೋಗ ತಗಲಿ ಹೋಗಿದೆ. ನೀನು ಕರುಣಾಳುಗಳಲ್ಲಿ ಅತ್ಯಂತ ಕರುಣಾಳು ಆಗಿರುತ್ತೀ" ಎಂದು ತಮ್ಮ ಪ್ರಭುವನ್ನು ಕೂಗಿ ಕರೆದರು. (ಪವಿತ್ರ ಕುರ್‌ಆನ್: 21:83)

ಅಲ್ಲಾಹನೊಡನೆ ಪ್ರಾರ್ಥಿಸಿ ಅವರು ನಿರಾಶರಾಗಲಿಲ್ಲ. ಅಲ್ಲಾಹ್ ಅವರಿಗೆ ಆರೋಗ್ಯ ಕರುಣಿಸಿದನು ಮತ್ತು ಅವರಿಂದ ಕಸಿಯಲ್ಪಟ್ಟುದಕ್ಕಿಂತಲೂ ಮಿಗಿಲಾದುದನ್ನು ಅವರಿಗೆ ಒದಗಿಸಿದನು.

ನಿರೀಕ್ಷೆಯ ಸರಿಯಾದ ಕಲ್ಪನೆ

ಅಲ್ಲಾಹನ ಮೇಲೆ ನಿರೀಕ್ಷೆ ಇರಿಸುವುದು ಮತ್ತು ಅವನಿಂದ ಕ್ಷಮೆಯ ಆಗ್ರಹವನ್ನಿರಿಸುವುದು ಎಂದರೆ ಸಮಸ್ಯೆ ತನ್ನಿಂತಾನೇ ಪರಿಹರಿಸಲ್ಪಡಲಿ ಎಂದು ಕೈ ಕಟ್ಟಿ ಕುಳಿತುಕೊಳ್ಳುವುದು ಎಂದು ಅರ್ಥವಲ್ಲ. ಇದು ನಿರೀಕ್ಷೆಯ ದುರ್ಬಲ ಕಲ್ಪನೆಯಾಗಿದೆ. ವ್ಯಕ್ತಿಯು ಅಲ್ಲಾಹನಲ್ಲಿ ನಿರೀಕ್ಷೆಯನ್ನೂ ಇರಿಸಬೇಕು ಮತ್ತು ತನ್ನ ಶಕ್ತ್ಯಾನುಸಾರ ಪ್ರಯತ್ನವನ್ನೂ ಮಾಡುತ್ತಿರಬೇಕು. ಕೇವಲ ಆಗ್ರಹದಿಂದ ಏನೂ ಆಗಲಾರದು. ಹಾಗಾಗಿ ಅಲ್ಲಾಹ್ ಹೇಳುತ್ತಾನೆ,

﴿ فَمَن كَانَ يَرْجُوا۟ لِقَآءَ رَبِّهِۦ فَلْيَعْمَلْ عَمَلًا صَٰلِحًا وَلَا يُشْرِكْ بِعِبَادَةِ رَبِّهِۦٓ أَحَدًۢا ﴿١١٠﴾ ﴾ الكهف: ١١٠

"ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ." (ಪವಿತ್ರ ಕುರ್‌ಆನ್: 18:110)

ಇನ್ನೊಂದೆಡೆ ಹೀಗೆಂದಿದ್ದಾನೆ,

﴿ إِنَّ ٱلَّذِينَ ءَامَنُوا۟ وَٱلَّذِينَ هَاجَرُوا۟ وَجَٰهَدُوا۟ فِى سَبِيلِ ٱللَّهِ أُو۟لَٰٓئِكَ يَرْجُونَ رَحْمَتَ ٱللَّهِ ۚ وَٱللَّهُ غَفُورٌ رَّحِيمٌ ﴿٢١٨﴾ ﴾ البقرة: ٢١٨

“ವಿಶ್ವಾಸವಿರಿಸಿದವರೂ ಅಲ್ಲಾಹನ ಮಾರ್ಗದಲ್ಲಿ ಮನೆಮಾರನ್ನು ಬಿಟ್ಟವರೂ ಜಿಹಾದ್ ನಡೆಸಿದವರೂ ಅಲ್ಲಾಹನ ಕೃಪೆಯನ್ನು ಅರ್ಹವಾಗಿ ನಿರೀಕ್ಷಿಸುವವರಾಗಿರುತ್ತಾರೆ ಮತ್ತು ಅಲ್ಲಾಹ್ ಅವರಿಂದ ಸಂಭವಿಸಿ ಹೋದ ಲೋಪ–ದೋಷಗಳನ್ನು ಕ್ಷಮಿಸುವವನೂ ತನ್ನ ಕರುಣೆಯಿಂದ ಅವರನ್ನು ಅನುಗ್ರಹಿಸುವವನೂ ಆಗಿರುತ್ತಾನೆ.” (ಪವಿತ್ರ ಕುರ್‌ಆನ್: 2: 218)

ಮಾನವನು ಅಲ್ಲಾಹನ ಮೇಲೆ ನಿರೀಕ್ಷೆಯನ್ನಿರಿಸಿ, ಅವನು ತನ್ನೊಡನೆ ಒಳಿತನ್ನು ಮಾಡುವವನು ಎಂದುಕೊಂಡು ಸ್ವಯಂ ಏನನ್ನೂ ಮಾಡದಿರುವುದು ಅಂದರೆ ಅಲ್ಲಾಹನು ಆದೇಶಿಸಿದ ಕಾರ್ಯಗಳನ್ನು ಮಾಡದೆ ಮತ್ತು ಅವನು ನಿಷೇಧಿಸಿರುವುದರಿಂದ ದೂರವಿರದೆ ಕೈ ಕಟ್ಟಿ ಸುಮ್ಮನೆ ಕುಳಿತು ಬಿಡುವುದು ಯಾವ ಕಾರಣಕ್ಕೂ ಸರಿಯಲ್ಲ. ಇದಂತೂ ಆತ್ಮವಂಚನೆಯಾಗಿದೆ. ಈ ವ್ಯವಹಾರವು ಪರಿಣಾಮಕಾರಿಯಾಗುವ ಬದಲು ನಗೆಪಾಟಲಿಗೀಡಾಗಬಹುದು. ಇಂತಹ ವ್ಯವಹಾರದಿಂದ ದೂರವಿರಲಿಕ್ಕಾಗಿಯೇ ಅಲ್ಲಾಹನ ಸಂದೇಶವಾಹಕರು(ಸ) ಹೀಗೆ ಹೇಳಿದ್ದಾರೆ,

"حسن الظن من حسن العبادة" (أبو داوود ، أحمد)

“ಸದ್ಭಾವನೆಯು ಉತ್ತಮ ಆರಾಧನೆಯಿಂದಲೇ ಸ್ಥಾಪಿತವಾಗುತ್ತದೆ.” (ಅಬೂದಾವೂದ್, ಅಹ್ಮದ್)

ನಿರೀಕ್ಷೆಯಲ್ಲಿಯೇ ಜಗತ್ತು ಸ್ಥಿರವಾಗಿದೆ ಎಂದು ಹೇಳಲಾಗುತ್ತದೆ. ಒಂದು ವೇಳೆ ನಿರೀಕ್ಷೆಯ ಕಿರಣವು ತಪ್ಪಿ ಹೋದರೆ, ವ್ಯಕ್ತಿಯು ಖಿನ್ನನಾಗುತ್ತಾನೆ. ಜೀವನದ ಸಂಘರ್ಷದಲ್ಲಿ ಯಶಸ್ಸಿನ ನಿರೀಕ್ಷೆಯೇ ಅವನನ್ನು ಸತತ ಪರಿಶ್ರಮಕ್ಕೆ ಪ್ರೇರೇಪಿಸುತ್ತಿರುತ್ತದೆ ಮತ್ತು ಅವನು ಸದಾ ಸಕ್ರಿಯನಾಗಿರುತ್ತಾನೆ. ಅನ್ಯಥಾ ಮಾನವನು ದಣಿದು ಸೋಲೊಪ್ಪಿಕೊಂಡು ಬಿಡುತ್ತಾನೆ ಮತ್ತು ಜೀವನೋತ್ಸಾಹವೇ ಬತ್ತಿ ಹೋಗುವಷ್ಟು ನಿರಾಶನಾಗಿ ಬಿಡುತ್ತಾನೆ. ನಿರಾಶೆಯ ಕೊನೆಯ ಹಂತವು ಗೋರಿಯಾಗಿದೆ; ಅದೇ ವೇಳೆ ನಿರೀಕ್ಷೆಯ ಇನ್ನೊಂದು ಹೆಸರೇ ಜೀವನವಾಗಿದೆ. ನಿರಾಶೆಯ ಜತೆಗೆ ಜೀವನವನ್ನು ಕಲ್ಪಿಸುವುದು ಅಸಾಧ್ಯ ಮತ್ತು ನಿರೀಕ್ಷೆಯ ಜೊತೆಯಲ್ಲಿ ಜೀವನವು ಸಂಪತ್ಭರಿತವಾಗುತ್ತದೆ. ಇದೇ ಕಾರಣಕ್ಕೆ ಅಲ್ಲಾಹನು ನಿರಾಶೆಯನ್ನು ಸತ್ಯ ನಿಷೇಧಕ್ಕೆ ಹೋಲಿಸಿದ್ದಾನೆ. ಕ್ಷಮೆಯ ನಿರೀಕ್ಷೆಯು ಮಾನವನನ್ನು ತೌಬಾದ ಬಾಗಿಲಿಗೆ ಕೊಂಡೊಯ್ಯುತ್ತದೆ; ಅಲ್ಲಾಹನಿಂದ ಬೇರ್ಪಟ್ಟವನನ್ನು ಅದು ಮತ್ತೆ ಅಲ್ಲಾಹನೊಂದಿಗೆ ಜೋಡಿಸುತ್ತದೆ. ಅಲ್ಲಾಹ್ ಹೇಳುತ್ತಾನೆ,

﴿ قُلْ يَٰعِبَادِيَ ٱلَّذِينَ أَسْرَفُوا۟ عَلَىٰٓ أَنفُسِهِمْ لَا تَقْنَطُوا۟ مِن رَّحْمَةِ ٱللَّهِ ۚ إِنَّ ٱللَّهَ يَغْفِرُ ٱلذُّنُوبَ جَمِيعًا ۚ إِنَّهُۥ هُوَ ٱلْغَفُورُ ٱلرَّحِيمُ ﴿٥٣﴾ ﴾ الزمر: ٥٣

“(ಸಂದೇಶವಾಹಕರೇ, ನನ್ನ ಪರವಾಗಿ) ಹೇಳಿರಿ, ತಮ್ಮ ಮೇಲೆಯೇ ಅತಿರೇಕವೆಸಗಿಕೊಂಡಿರುವ ನನ್ನ ದಾಸರೇ, ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹ್ ಸಕಲ ಪಾಪಗಳನ್ನು ಕ್ಷಮಿಸಿ ಬಿಡುತ್ತಾನೆ. ಅವನಂತೂ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.” (ಪವಿತ್ರ ಕುರ್‌ಆನ್: 39:53)

ಅಲ್ಲಾಹನು ತನ್ನನ್ನು ಕ್ಷಮಿಸುವವನು ಮತ್ತು ತನ್ನ ಮೇಲೆ ಕರುಣೆ ತೋರುವವನು ಎಂಬ ನಿರೀಕ್ಷೆಯೇ ಪಾಪಗಳಿಂದ ತುಂಬಿಕೊಂಡಿರುವ ಮಾನವನ ಕೊನೆಯ ಆಶ್ರಯವಾಗಿದೆ. ನಿರೀಕ್ಷೆಯು ಅಲ್ಲಾಹನ ಒಂದು ಅನುಗ್ರಹವಾಗಿದೆ. ಒಂದು ವೇಳೆ ಅದು ಕೈ ತಪ್ಪಿ ಹೋದರೆ ಜಗತ್ತೇ ಅಂಧಕಾರಮಯವಾಗುತ್ತದೆ; ಒಂದು ವೇಳೆ ಅದು ದೊರೆತರೆ ಮಾನವನು ಬಂಜರಿನಲ್ಲೂ ಹೂವರಳಿಸಬಲ್ಲನು. ಅಲ್ಲಾಹನ ಸಂದೇಶವಾಹಕರ(ಸ) ಈ ವಾಣಿಯ ಬಗ್ಗೆ ಚಿಂತಿಸಿ. ಅವರು ಹೀಗೆಂದರು,

"إن قامت الساعة وفي يد أحدكم فسيل ، فإن استطاع ألا تقوم الساعة حتى يغرسها فليفعل" (أبو داوود، الطيالسي).

“ಒಂದು ವೇಳೆ ಲೋಕಾಂತ್ಯವಾಗುತ್ತದೆ ಎಂದು ಕಂಡರೂ ನಿಮ್ಮ ಕೈಯಲ್ಲಿ ಒಂದು ಗಿಡವಿದ್ದರೆ, ಅದನ್ನು ನೆಡಲು ಸಾಧ್ಯವಿದ್ದರೆ ಖಂಡಿತ ನೆಟ್ಟು ಬಿಡಿರಿ.” (ಅಬೂದಾವೂದ್ ಅಲ್ ತಯಾಲುಸೀ)

www.uzairfalahi.com

ಕೊಂಚ ಆಲೋಚಿಸಿ ನೋಡಿ. ಸಂಸ್ಕೃತಿ ಮತ್ತು ನಾಗರಿಕತೆಯ ಈ ಲಾವಣ್ಯ, ಸಂಶೋಧನೆಗಳು ಮತ್ತು ಆವಿಷ್ಕಾರಗಳ ಕೌತುಕತೆ, ಜೀವನದ ಜಂಜಾಟಗಳಲ್ಲಿರುವ ಈ ಗದ್ದಲ ಮತ್ತು ಜೀವನೋತ್ಸಾಹ ಎಲ್ಲವೂ ಯಾವುದರ ಆಧಾರದಲ್ಲಿ ಸ್ಥಿರವಾಗಿವೆ? ಒಂದು ವೇಳೆ ಮಾನವನ ಅಸ್ತಿತ್ವದಿಂದ ನಿರೀಕ್ಷೆ ಮತ್ತು ಆಗ್ರಹದ ಶಕ್ತಿಯನ್ನು ಬೇರ್ಪಡಿಸಿ ನೋಡಿ... ಈ ಜೀವನದ ಕಾರ್ಖಾನೆಯು ಸಂಪೂರ್ಣ ತಣ್ಣಗಾಗಿ ಬಿಡಬಹುದು.

ನಿನ್ನ ನಿರೀಕ್ಷೆಯಲ್ಲಿ ಒಂದಿನಿತೂ ಇಲ್ಲದಿರೆ ಬಲ
ಓ ಮುಗುದಾ, ನಿನ್ನ ಪ್ರೀತಿಯಿಂದೇನು ಫಲ

* * * * *

www.uzairfalahi.com